ಕಥೆ

# ಪುನರಪಿ ಜನನಂ



**ಶಶಿಕಲಾ ಬಾಯಾರು**

ಕಲೆ: ರೂಪಶ್ರೀ ಕಲ್ಲಿಗನೂರು



ಒಂದು ವಿಸ್ಮೃತಿಯ ಆಚೆ ನಿಧಾನವಾಗಿ ಮರುಕಳಿಸಿದ ಪ್ರಜ್ಞೆಗೆ ಜೀವವೇ ಇಲ್ಲದ ಭಾವ. ಎದುರಿಗೆ ತೀರ ತೆಳುವಾಗಿ ಗೋಚರಿಸುತ್ತಿರುವ ವಾಸ್ತವ. ಇದನ್ನು ನಾನು ಎದುರಿಸಬಲ್ಲೆನೆ? 'ಇಲ್ಲ... ಇಲ್ಲ' ಎಂದು ಯಾತನೆಯೇ ದನಿಯಾಗಿ ಅರಚಿತು. ಅಬೋಧಾವಸ್ಥೆಗೆ ಜಾರುತ್ತಿರುವಾಗ ಕೊನೆ ಕ್ಷಣದಲ್ಲಿ ಹಾಗೆ ಚೀರಿರಬೇಕು ನಾನು. 'ಇಲ್ಲ, ಹಾಗಾಗಿಲ್ಲ. ಆಗುವುದು ಸಾಧ್ಯವೇ ಇಲ್ಲ!' ಆದರೆ... ಆಗಿ ಹೋಗಿದೆ. ನಿರ್ದಯ ಸತ್ಯ ತನ್ನ ನಿಷ್ಠುರ ನಿಲುವಿನಲ್ಲಿ ಸ್ಪಷ್ಟವಾಗಿದೆ. ಹತ್ತಿರ ಯಾರಿದ್ದಾರೆ? ನನಗೇನೂ ತಿಳೀತಾ ಇಲ್ಲ. ಯಾರೋ ಮಲಗಿದಲ್ಲಿಂದ ಎಬ್ಬಿಸಿ ಕೂರಿಸಿ ಬೆನ್ನಮೇಲೆ ಕೈಯಾಡಿಸ್ತಾ ಇದ್ದಾರೆ. ಆ ಕೈಗಳೂ ಮರುಕದಲ್ಲಿ ಮರಗಟ್ಟಿದಂತಿವೆ. ತಲೆಗೆ, ಮುಖಕ್ಕೆ ನೀರು ಹಾಕಿರಬೇಕು. ಸುತ್ತಲೂ ತೀರ ತೇವವಾಗಿದೆ. ಅವರೆಲ್ಲರ ಕಣ್ಣುಗಳಿಂದ ಹರಿದು ಬರುವ ನೀರೂ ಇಲ್ಲೇ ಸೇರುವಂತಿದೆ. ಜೀವದ ಸಂಚಲವನವೇ ಇಲ್ಲದ ಸಾಲು ಸಾಲು ಮುಖಗಳು ಸತತ ಕಣ್ಣೆದುರಿಗೆ ಸರಿಯುತ್ತಿವೆ. ಯಾರೂ ಮಾತಾಡುತ್ತಿಲ್ಲ. ಮಾತಿಗೆ ಮೀರಿದ ಅನುಭೂತಿಯಲ್ಲಿ ಇಷ್ಟೆಲ್ಲ ಜನ ಸೇರಿ ಹೊಸೆದ ಮೌನದ ಹಗ್ಗ ಕತ್ತು ಬಿಗಿದು ಉಸಿರುಗಟ್ಟಿಸುತ್ತಿದೆ. ಸುದ್ದಿ ತಿಳಿದಾಗ ತಲೆಯೊಳಗೆ ಎಳೆದು ಬಿಗಿದ ನರಗಳು ಸಡಿಲಾಗದೆ ಅಲ್ಲಿಗೇ ತಲೆಸಿಡಿದು ಒಡೆದೇ ಹೋಗುವ ನೋವು ವ್ಯಾಪಿಸಿದೆ. ಅರಿವು ಮೂಡಿ ಎಲ್ಲ ಅರ್ಥವಾಗುವ ಈ ಅವಸ್ಥೆಗಿಂತ ಯಾವುದೂ ಇಲ್ಲದ ಪ್ರಜ್ಞಾಹೀನ ಪರಿಧಿಯೇ ಸರಿಯೆನಿಸುತ್ತಿದೆ. ಮಹತ್ತರ ಮಮಕಾರಗಳ ಮಾಯಾಜಾಲವಿತ್ತು, ಅದರೊಳಗೆ ನನಗಿಷ್ಟು ಒದ್ದಾಟವಿದೆ, ನರಳಾಟವಿದೆ. ರಕ್ತ ಬಂಧದ ಅತಿಶಯ ಪರಿಣಾಮಗಳ ಹೆತ್ತವರಿದ್ದಾರೆ. ಇಂತಹ ಘೋರ ಹೊಡೆತವನ್ನು ಎದುರಿಸಿ ಅನುಭವಿಸುವ ಶಕ್ತಿಯನ್ನು ಅವರೆಲ್ಲಿಂದ ಪಡೆಯಬೇಕು? ಅವರೇನಾಗಿರಬಹುದು?

'ಸ್ಟೇಟ್ ಲೆವೆಲಿನ ಫೈನಲ್ ಮ್ಯಾಚ್ ನಡೀತಾಯಿತ್ತಂತೆ. ಗೆಲುವಿನ